DECEMBER 07, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, ನಾಳೆಯಿಂದ 19ನೇ ತಾರೀಖಿನ ವರೆಗೆ, ವಿಧಾನಮಂಡಲ, ಚಳಿಗಾಲದ ಅಧಿವೇಶನ.
- ಹುಬ್ಬಳ್ಳಿ–ಅಂಕೋಲಾ ರೇಲ್ವೆ; 16 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ, ಕಾಮಗಾರಿ.
- ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ, 'ಸೀ ಆಂಬುಲೆನ್ಸ್' ವ್ಯವಸ್ಥೆ, ಶೀಘ್ರ ಕಾರ್ಯಾರಂಭ.
- ಇಂದು, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ವಿಧಾನ ಮಂಡಲ ಚಳಿಗಾಲದ ಅಧಿವೇಶನ, ನಾಳೆ ಸೋಮವಾರದಿಂದ, 19ನೇ ತಾರೀಖಿನ ವರೆಗೆ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿದೆ. ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಪೊಲೀಸ್ ಬಿಗಿ ಭದ್ರತೆ ವ್ಯವಸ್ಥೆ ಮಾಡಲಾಗಿದೆ. ಹಕ್ಕೊತ್ತಾಯದ ಮನವಿ ಸಲ್ಲಿಸಲು, ಧರಣಿ, ಪ್ರತಿಭಟನೆ ನಡೆಸುವ ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೆ, ಸ್ಥಳ ನಿಗದಿ ಪಡಿಸಲಾಗಿದೆ. ಸೌಧದ ಸುತ್ತಲಿನ ರೈತರು, ಒಟ್ಟಿ ಇಟ್ಟಿದ್ದ ಸುಗ್ಗಿಯ ರಾಶಿ ಮತ್ತು ಬಣವಿಯನ್ನು, ಅಧಿವೇಶನದ ಹಿನ್ನೆಲೆ, ತರಾತುರಿ ಒಕ್ಕಲು ಕೈಗೊಂಡು, ತೆರವು ಗೊಳಿಸಿದ್ದಾರೆ. ಸುವರ್ಣ ಸೌಧಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ರಾತ್ರಿ ವೇಳೆ, ಗಮನ ಸೆಳೆಯುತ್ತಿದೆ.

<><><>

ಉತ್ತರ ಕರ್ನಾಟಕದ ಸಮಸ್ಯೆ, ರೈತರ ಸಂಕ ್ಟ, ನೀರಾವರಿ ಸಮಸ್ಯೆ ಸೇರಿದಂತೆ, ವಿವಿಧ ವಿ ಯಗಳ ಕುರಿತು, ವಿಧಾನಮಂಡಲ ಅಧಿವೇಶನದಲ್ಲಿ, ಪ್ರಸ್ತಾಪಿಸುವ ಬಗ್ಗೆ, ವಿಪಕ್ಷ ನಾಯಕರೊಂದಿಗೆ, ಸುದೀರ್ಘ ಚರ್ಚೆ ನಡೆಸಿದ್ದಾಗಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಹಾಸನದಲ್ಲಿ ಮಾತನಾಡಿ, ಸಂಸತ್ ಮತ್ತು ವಿಧಾನ ಮಂಡಲದಲ್ಲಿ, ಮಹಿಳಾ ಮೀಸಲು ಜಾರಿಯಾಗಬೇಕು ಎನ್ನುವುದು, ತಮ್ಮ ಪಕ್ಷದ ಅಚಲ ನಿಲುವು ಎಂದರು.

<><><>

ರಾಜ್ಯ ಸರ್ಕಾರ, ಉಭಯ ಸದನಗಳನ್ನು ಸಸೂತ್ರವಾಗಿ ನಡೆಸಲು, ವ್ಯಾಪಕ ಪೂರ್ವ ಸಿದ್ಧತೆ ಕೈಗೊಂಡಿದೆ. ಅರ್ಥಪೂರ್ಣ ಮತ್ತು ಮಹತ್ವದ ಚರ್ಚೆಗಳನ್ನು ಕೈಗೊಳ್ಳಲು, ಸಚಿವ ಸಂಪುಟ ಸಿದ್ಧವಾಗಿದೆ.

<><><>

ಹುಬ್ಬಳ್ಳಿ–ಅಂಕೋಲಾ ಮಧ್ಯದ, 164 ಕಿಲೋ ಮೀಟರ್ ಉದ್ದದ, ರೇಲ್ವೆಕಾಮಗಾರಿಯನ್ನು, 16 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದು, ರೇಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯ, ಕಾರವಾರ ರೇಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಸಚಿವರು, ಅಮೃತ ಯೋಜನೆ ಅಡಿ, ಭಟ್ಕಳ, ಮುರುಡೇಶ್ವರ, ಗೋಕರ್ಣ ಮತ್ತು ಹೊನ್ನಾವರ ರೈಲು ನಿಲ್ದಾಣಗಳ ಆಧುನೀಕರಣ ನಡೆದಿದೆ ಎಂದರು. ಉತ್ತರಕನ್ನಡ ಜಿಲ್ಲೆಯಲ್ಲಿ, ರೇಲ್ವೆ ಇಲಾಖೆ, 21 ಸಾವಿರ ಕೋಟಿ ರೂಪಾಯಿ ಮೌಲ್ಯದ, ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ ಎಂದರು.

<><><>

ಕೇಂದ್ರ ಪುರಸ್ಕೃತ, ರಾಷ್ಟ್ರೀಯ ಕೃಷಿ ವಿಕಾಸ ಹಾಗೂ ನಾವಿನ್ಯತೆ ಮತ್ತುಕೃಷಿ ಉದ್ಯಮಶೀಲತೆ ಯೋಜನೆ – ಆರ್.ಕೆ.ವಿ.ವೈ. ಅಡಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, 'ಕೃಷಿಕ' – ಕೃಷಿ ನವೋದ್ಯಮ ಪೋಷಣ ಕೇಂದ್ರದ ವತಿಯಿಂದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಜರುಗಿದ, ರಾಷ್ಟ್ರೀಯ ಕೃಷಿ ನವೋದ್ಯಮ ಪ್ರದರ್ಶಿನಿ, ಯಶಸ್ವಿಯಾಗಿ ಸಂಪನ್ನಗೊಂಡಿತು. 135ಕ್ಕೂ ಹೆಚ್ಚು, ಕೃಷಿ ಮತ್ತು ಕೃಷಿ ಸಂಬಂಧಿ ತಂತ್ರಜ್ಞಾನ, ಯಾಂತ್ರಿಕತೆಯ ನವೋದ್ಯಮಿಗಳು ಪಾಲ್ಗೊಂಡು, ವ್ಯಾಪಾರ, ವಹಿವಾಟುಗಳ ಒಡಂಬಡಿಕೆ, ವಿಚಾರ ವಿನಿಮಯ ಕೈಗೊಂಡರು. ಈ ಕುರಿತು, ಮಾಹಿತಿ ನೀಡಿದ್ದಾರೆ, ರಾಷ್ಟ್ರೀಯ ಕೃಷಿ ನವೋದ್ಯಮ ಪ್ರದರ್ಶಿನಿ, ಸಿ.ಇ.ಓ., ಎಸ್.ಎಸ್.ಡೊಳ್ಳಿ.

<><><>

ಎಸ್.ಎಸ್.ಡೊಳ್ಳಿ ಧ್ವನಿ 48 ಸೆಕೆಂದುಗಳು.

<><><>

'ಸ್ಥಳೀಯ ಆರ್ಥಿಕತೆ ವೇಗವರ್ಧನೆ ಕಾರ್ಯಕ್ರಮ' – ಲೀಪ್ ಯೋಜನೆ ಅಡಿ, ಕಲಬುರಗಿಯನ್ನು ಕೇಂದ್ರೀಕರಿಸಿ, ಮಾಹಿತಿ ತಂತ್ರಜ್ಞಾನ ವಲಯವನ್ನು ವಿಸ್ತರಿಸುವ ಗುರಿಯೊಂದಿಗೆ, ಕರ್ನಾಟಕ ಡಿಜಿಟಲ್ ಎಕಾನಮಿ ಮಿ ನ್‌ಗೆ ಚಾಲನೆ ನೀಡಲಾಗಿದೆ ಎಂದು, ಕಲಬುರಗಿ ಜಿಲ್ಲೆ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ, ತಿಳಿಸಿದ್ದಾರೆ. ಕಲಬುರಗಿಯಲ್ಲಿ ಮಾತನಾಡಿದ ಅವರು, ನೂತನ ಸ್ಟಾರ್ಟ್‌ಅಪ್‌ಗಳು, ಗ್ಲೋಬಲ್ ಕೆಪೆಬಿಲಿಟಿ ಸೆಂಟರ್‌ಗಳು ಮತ್ತು ನಾವಿನ್ಯತಾ ಕೇಂದ್ರಗಳ ಸ್ಥಾಪನೆ, ಮಾರುಕಟ್ಟೆ ವೃದ್ಧಿ ಹಾಗೂ ನವೋದ್ಯಮ ಸ್ಥಾಪನೆ ಉದ್ದೇಶ ಹೊಂದಲಾಗಿದೆ ಎಂದರು.

<><><>

ಹುಬ್ಬಳ್ಳಿ–ಧಾರವಾಡದಲ್ಲಿ, ಇಲೆಕ್ಟ್ರಿಕ್ ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಜಾರಿ ಕುರಿತು, ಮುಖ್ಯಮಂತ್ರಿಯವರ ಗೃಹ ಕಚೇರಿ ಕೃ ದಲ್ಲಿ, ಸಿದ್ದರಾಮಯ್ಯ ಸಭೆ ನಡೆಸಿ, ಯೋಜನೆಯ ಕಾರ್ಯಸಾಧ್ಯತೆ, ಬಗ್ಗೆ ಚರ್ಚಿಸಿದರು. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಸೇರಿದಂತೆ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ತುರ್ತು ಸಂದರ್ಭಗಳಲ್ಲಿ, ಮೀನುಗಾರರ ಜೀವ ರಕ್ಷಿಸಲು, ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ, 'ಸೀ ಆಂಬುಲೆನ್ಸ್' ವ್ಯವಸ್ಥೆ, ಶೀಘ್ರ ಆರಂಭವಾಗಲಿದೆ ಎಂದು, ರಾಜ್ಯ ಮೀನುಗಾರಿಕೆ, ಹಾಗೂ ಒಳನಾಡು ಜಲ ಸಾರಿಗೆ ಖಾತೆ ಸಚಿವ, ಮಂಕಾಳ ವೈದ್ಯ ತಿಳಿಸಿದ್ದಾರೆ. ಕೇಂದ್ರ ಪುರಸ್ಕೃತ ಮತ್ಸ್ಯ ಸಂಪದ ಯೋಜನೆಯಡಿ, ಮಂಗಳೂರು ಮೀನುಗಾರಿಕೆ ಬಂದರಿನ, ಆಧುನೀಕರಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು. ಮೀನುಗಾರರು, ಬೇರೆ ರಾಜ್ಯಗಳ ಗಡಿ ದಾಟಿದರೆ, ಬೋಟ್‌ಗಳನ್ನು ಹಿಡಿದು, ದಂಡ ವಿಧಿಸಲಾಗುತ್ತಿದೆ. ಈ ಕ್ರಮ ಸರಿಯಲ್ಲ. ಮೀನುಗಾರರಿಗೆ ಕರ ರಹಿತ ಡೀಸೆಲ್ ನೀಡಲಾಗುತ್ತಿದೆ. ಕರಾವಳಿಯ ಮೂರು ಜಿಲ್ಲೆಗಳಲ್ಲಿ, ಮೀನುಗಾರರಿಗೆ ಲೀಟರ್‌ಗೆ 35 ರೂಪಾಯಿ ದರದಲ್ಲಿ ಸೀಮೆ ಎಣ್ಣೆ ಸಹ ಒದಗಿಸಲಾಗುತ್ತಿದೆ. ಮೀನುಗಾರಿಕೆ ಸಂದರ್ಭದಲ್ಲಿ, ಮೃತಪಟ್ಟ ಮೀನುಗಾರರ ಕುಟುಂಬಕ್ಕೆ, 10 ಲಕ್ಷ ರೂಪಾಯಿ ಪರಿಹಾರ ನೀಡಲಾಗುತ್ತಿದೆ ಎಂದು, ಸಚಿವರು ಹೇಳಿದರು.

<><><>

ಇಂದು, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ. ಕಳೆದ 1949ರ, ಡಿಸೆಂಬರ್ 7 ರಿಂದ, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಕೈಗೊಂಡು, ಭಾರತದ ಗೌರವವನ್ನು ಕಾಪಾಡಲು, ನಮ್ಮ ಗಡಿಗಳಲ್ಲಿ, ಶೌರ್ಯದಿಂದ ಹೋರಾಡಿದ, ಮತ್ತು ಹೋರಾಡುತ್ತಿರುವ, ಸಮವಸ್ತ್ರಧಾರಿ ಯೋಧರನ್ನು, ಗೌರವಿಸಲಾಗುತ್ತದೆ. ಸಶಸ್ತ್ರ ಪಡೆಗಳ, ವೀರ ಯೋಧರ, ಶೌರ್ಯ, ಸಾಹಸ, ತ್ಯಾಗ ಮತ್ತು ಪರಮೋಚ್ಛ ಬಲಿದಾನಗಳನ್ನು, ನಾಡವರಿಗೆ ತಿಳಿಸಿ, ಮಾತೃಭೂಮಿಯ ಸೇವೆಯಲ್ಲಿ, ತಮ್ಮ ಪ್ರಾಣವನ್ನೇ ಅರ್ಪಿಸುವ, ಧೀರ ಯೋಧರಿಗೆ, ನಾಡಿನಾದ್ಯಂತ ಇಂದು, ಗೌರವ ಸಮರ್ಪಿಸಲಾಗುತ್ತಿದೆ. ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಕುರಿತು, ಮಾಹಿತಿ ನೀಡಿದ್ದಾರೆ, ವಿಶ್ರಾಂತ ಏರ್ ಕಮೋಡೋರ್, ಸಿ.ಎಸ್. ಹವಾಲ್ದಾರ.

<><><>

ಏರ್ ಕಮೋಡೋರ್ ಸಿ.ಎಸ್. ಹವಾಲ್ದಾರ ಧ್ವನಿ 56 ಸೆಕೆಂದುಗಳು

<><><>

ವಿಜಯಪುರದ, ಬಿ.ಆರ್. ಅಂಬೇಡ್ಕರ ಮೈದಾನದಲ್ಲಿ, ಇಂದು ಬೆಳಗ್ಗೆ 5.30ಕ್ಕೆ, ಜಲ, ವೃಕ್ಷ, ಶಿಕ್ಷಣ ಧ್ಯೇಯದೊಂದಿಗೆ, ವೃಕ್ಷಥಾನ್ ಹೆರಿಟೇಜ್ ರನ್‌ಗೆ ಚಾಲನೆ ದೊರೆತಿದೆ. ದೇಶ–ವಿದೇಶಗಳಿಂದ, 20 ಸಾವಿರಕ್ಕೂ ಅಧಿಕ ಓಟಗಾರರು, ಪರಿಸರ ಜಾಗೃತಿಗಾಗಿ ಆರಂಭಿಸಿದ ವಿವಿಧ ಹಂತಗಳ ಓಟ, ಇನ್ನು ಕೆಲವೇ ಕ್ಷಣಗಳಲ್ಲಿ ಸಂಪನ್ನಗೊಳ್ಳಲಿದೆ.

ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ. ಪಾಟೀಲ ಪಾಲ್ಗೊಂಡಿದ್ದು, ವೃಕ್ಷಥಾನ್ ಪಾರಂಪರಿಕ ಓಟ, ವಿಜಯಪುರದ ಸಂಸ್ಕೃತಿ, ಕಲೆ ಹಾಗೂ ಪರಂಪರೆಯನ್ನು, ಅನಾವರಣಗೊಳಿಸಲಿದೆ ಎಂದಿದ್ದಾರೆ.

<><><>

ಕೋಲಾರ ನಗರವನ್ನು, ಸ್ವಚ್ಛ ಮತ್ತು ಸುಂದರವಾಗಿಸಲು, 'ಕೋಲಾರಮ್ಮ ಸ್ವಚ್ಛತಾ ಕಾರ್ಯ ಪಡೆ' ಇಂದಿನಿಂದ, ನಗರದಲ್ಲಿ ಸ್ವಚ್ಛತಾ ಕಾರ್ಯ ಆರಂಭಿಸಲಿದೆ. ಜಿಲ್ಲಾಧಿಕಾರಿ ಎಂ.ಆರ್.ರವಿ ಮಾಹಿತಿ ನೀಡಿ, ಇಂದು ಬೆಳಗ್ಗೆ 6 ಗಂಟೆಯಿಂದ ಸ್ವಚ್ಛತಾ ಕಾರ್ಯ ಆರಂಭವಾಗಿದ್ದು, ಇಂದು ಸಂಜೆ 5 ಗಂಟೆ ವರೆಗೂ, ನಗರದಾದ್ಯಂತ, ನಾಗರಿಕರ ಸಹಭಾಗಿತ್ವದಲ್ಲಿ, ಸ್ವಚ್ಛತಾ ಕಾರ್ಯ ನಡೆಯಲಿದೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, ನಾಳೆಯಿಂದ 19ನೇ ತಾರೀಖಿನ ವರೆಗೆ, ವಿಧಾನಮಂಡಲ, ಚಳಿಗಾಲದ ಅಧಿವೇಶನ.
- ಹುಬ್ಬಳ್ಳಿ–ಅಂಕೋಲಾ ರೇಲ್ವೆ; 16 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ, ಕಾಮಗಾರಿ.
- ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ, 'ಸೀ ಆಂಬುಲೆನ್ಸ್' ವ್ಯವಸ್ಥೆ, ಶೀಘ್ರ ಕಾರ್ಯಾರಂಭ.
- ಇಂದು, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ;

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>